**C.C.** 1634-22

ಪಿ.ಡಬ್ಲ್ಯೂ-6

ಸಿ.ಡಬ್ಲ್ಯೂ-17

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 03.08.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಆರೋಪಿ ನನ್ನ ಸ್ನೇಹಿತ ಅಂದರೆ ಸರಿ. ರೇಲ್ವೆ ಅಧಿಕಾರಿ ನನಗೆ ಪೋನ್ ಮಾಡಿ ಮಂಜುನಾಥನಗರದಿಂದ ರೇಲ್ವೆ ಸ್ಟೇಶನ್ ಗೆ ತನ್ನನ್ನು ಕರೆದುಕೊಂಡು ಹೋಗುವಂತೆ ಕೋರಿಕೊಂಡ ಮೇರೆಗೆ ನಾನು ಆರೋಪಿಯನ್ನು ಕರೆದುಕೊಂಡು ಹೋಗಿದ್ದೆ ಅಂದರೆ ಸರಿ. ಆರೋಪಿ ಚಾಲನೆ ಮಾಡುತ್ತಿದ್ದ ಅಂದರೆ ಸರಿ. ರೇಲ್ವೆ ಅಧಿಕಾರಿಯನ್ನು ಬಿಟ್ಟು ಬರುತ್ತಿದ್ದೆ ಅಂದರೆ ಸರಿ. ಆರೋಪಿ ಪೋಲಿಸ ಬ್ಯಾರಿಕೇಡ್ ಡಿಕ್ಕಿಪಡಿಸಿದ ಅಂದರೆ ಸರಿಯಲ್ಲ. ಸ್ಕೂಟರಿಗೆ ಡಿಕ್ಕಿಪಡಿಸಿದ ಅಂದರೆ ಸರಿಯಲ್ಲ. ನನ್ನ ಗಾಡಿಗೆ ಏನೂ ಆಗಿರಲಿಲ್ಲ. ನಂತರ ಏನಾಗಿದೆ ಎಂದು ಗೊತ್ತಿಲ್ಲ, ಆದರೆ ನಾನು ಹೋಗಿರುತ್ತೇನೆ. ನಾನು ಸ್ಥಳದಲ್ಲಿ ನಿಂತಿರಲಿಲ್ಲ. ಅವರು ಗಾಡಿಯಿಂದ ಕೆಳಗೆ ಬಿದ್ದವರು ಏನಾದರೂ ಎಂದು ಗೊತ್ತಿಲ್ಲ. ಸ್ಕೂಟಿಯಲ್ಲಿದ್ದ ಹಿಂಬದಿ ಸವಾರಳು ಕೆಳಗೆ ಬಿದ್ದಿದ್ದನ್ನು ನೋಡಿ ಆರೋಪಿತ ಅವಳು ಜೀವಂತ ಇರುವುದನ್ನು ತಿಳಿದು ಪುನಃ ವೇಗವಾಗಿ ಕಾರನ್ನು ಚಲಾಯಿಸಿಕೊಂಡು ಅವಳ ಮೇಲೆ ಕಾರನ್ನು ಹತ್ತಿಸಿ ಅವಳು ಮರಣ ಹೊಂದುವಂತೆ ಮಾಡಿದನು ಅಂದರೆ ಸರಿಯಲ್ಲ. ನಾವು ಸಿಗಬಾರದೆಂದು ನವಲಗುಂದ ಕಡೆಗೆ ಬಚ್ಚಿಟ್ಟುಕೊಳ್ಳಲು ಹೋಗಿದ್ದೆವು ಅಂದರೆ ಸರಿಯಲ್ಲ. ಪೋಲಿಸರು ನಮ್ಮ ಕಾರನ್ನು ತೆಗೆದುಕೊಂಡು ಹೋಗಿದ್ದರು. ತಿರ್ಲಾಪೂರ ಜಾತ್ರೆಯಿಂದ ನಮ್ಮ ಕಾರನ್ನು ತೆಗೆದುಕೊಂಡು ಬಂದಿರುತ್ತಾರೆ. ನಾವು ಸಿಗಬಾರದೆಂದು ಕಾರನ್ನು ಜಾತ್ರೆಯಲ್ಲಿ ಹಚ್ಚಿ ನಾವು ಅಲ್ಲಿಂದ ಪರಾರಿಯಾಗಿರುತ್ತೇವೆ ಅಂದರೆ ಸರಿಯಲ್ಲ. ಸದರಿ ಅಪಘಾತದ ಪಡಿಸಿದ ವಿಷಯವನ್ನು ಪೋಲಿಸರಿಗೆ ಹೇಳಿಲ್ಲ. ನಾನು ಆರೋಪಿಗೆ ಕುಮ್ಮಕ್ಕು ನೀಡಿದೆನು ಅಂದರೆ ಸರಿಯಲ್ಲ. ಆ ಕಾರು ಸಿಗಬಾರದೆಂದು ತಿರ್ಲಾಪೂರ ಜಾತ್ರೆಯಲ್ಲಿ ಕಾರ ಮುಚ್ಚಿಟ್ಟು ಸಾಕ್ಷಿ ನಾಶಪಡಿಸಿರುತ್ತೇವೆ ಅಂದರೆ ಸರಿಯಲ್ಲ. ಆ ಮಹಿಳೆ ಹಿಂದಿನ ಗಾಡಿಯಲ್ಲಿ ಬಿದ್ದು ಸತ್ತಿರುತ್ತಾಳೆ ಅಂತಾ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಕಾರ ಹಾಗೂ ಆರೋಪಿಯನ್ನು ರಕ್ಷಿಸುವ ಸಲುವಾಗಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ಆರೋಪಿಗೆ ಕುಮ್ಮಕ್ಕು ನೀಡಿದ ಹಾಗೂ ಸಾಕ್ಷಿ ನಾಶಪಡಿಸಿದ ಬಗ್ಗೆ ಆರೋಪಿ ಅಂದರೆ ಸರಿಯಲ್ಲ. ನಾನು ಪೋಲಿಸರಿಗೆ ಹಾಗೂ ನ್ಯಾಯಾಲಯಕ್ಕೆ ಸುಳ್ಳು ಸಂಗತಿಗಳನ್ನು ಹೇಳಿದ್ದೇನೆ ಅಂದರೆ ಸರಿಯಲ್ಲ. ಒಪ್ಪಿಕೊಳ್ಳುವ ಸಾಕ್ಷಿ ಹೇಳಿಕೆಯನ್ನು ನಿಪಿ.24 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಏನೂ ಇಲ್ಲ.**

**ಮರು ವಿಚಾರಣೆ ಃ ಇಲ್ಲಾ.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ

# ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ

**C.C. 1634-22** ಪಿ.ಡಬ್ಲ್ಯೂ-12

ಸಿ.ಡಬ್ಲ್ಯೂ-21

ಸಾಕ್ಷಿದಾರರ ಹೆಸರು ಃ ಧರ್ಮರಾಜ ಜಾಧವ

ತಂದೆ/ಗಂಡನ ಹೆಸರು ಃ ಅಪ್ಪಣ್ಣ

ವಯಸ್ಸು ಃ 37 ವರ್ಷ

ಉದ್ಯೋಗ ಃ ಪೋಲಿಸ ಪೇದೆ -2509

ವಾಸಸ್ಥಳ ಃ ಧಾರವಾಡ ಟ್ರಾಫಿಕ್ ಪೋಲಿಸ ಠಾಣೆ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 03.08.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಪೂರ್ವ ಸಂಚಾರಿ ಪೋಲಿಸ ಠಾಣೆಯಲ್ಲಿ 2022-23 ರಲ್ಲಿ ಸೇವೆ ಸಲ್ಲಿಸಿರುತ್ತೇನೆ. ದಿಃ 2.22.2022 ರಂದು ನಾನು ಕರ್ತವ್ಯದ ಮೇಲಿದ್ದಾಗ ನಮ್ಮ ಠಾಣೆಯ ಪೋಲಿಸ ಇನ್ಸಪೆಕ್ಟರವರು ಎನ್ ಸಿ ಕಾಡದೇವರಮಠ, ಚಾಸಾ-28 ರವರು ನನಗೆ ಠಾಣೆಗೆ ಕರೆಸಿ ನಮ್ಮ ಠಾಣೆಯಲ್ಲಿ ದಾಖಲಾದ ಪ್ರಸ್ತು ತಪ್ರಕರಣದಲ್ಲಿ ನಿಪಿ.13 ನ್ನು ತಯಾರಿಸುವ ಕಾಲದಲ್ಲಿ ಮತ್ತು ಘಟನಾ ಸ್ಥಳದ ಪಂಚನಾಮೆಯ ಕಾಲಕ್ಕೆ ಹಾಗೂ ಅಪಘಾತಪಡಿಸಿದ ಕಾರನ್ನು ವಶಪಡಿಸಿಕೊಳ್ಳುವ ಕಾಲದಲ್ಲಿ ಮತ್ತು ಅಪಘಾತಪಡಿಸಿ ಹೋದ ಕಾರನ್ನು ಗುರುತಿಸುವ ಕಾಲಕ್ಕೆ ತಮ್ಮ ಪೋನಿನಿಂದ ಪೊಟೋಗಳನ್ನು ತೆಗೆದು ನನ್ನ ಮುಂದೆ ಹಾಜರಪಡಿಸಲು ಹೇಳಿದ ಮೇರೆಗೆ ನಾನು ದಿಃ 22.2.2022 ರಂದು ಮೃತ ವ್ಯಕ್ತಿ ಪೊಟೋ ತೆಗೆದಿರುತ್ತೇನೆ. ಪೊಟೋ ನೋಡಿ ಗುರುತಿಸಿದ್ದು, ಅದನ್ನು ನಿಪಿ. 25 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.4 ಮತ್ತು 5 ಹಾಗೂ 7 ಗಳನ್ನು ನೋಡಿ ಗುರುತಿಸಿರುತ್ತಾರೆ. ಈ ಕುರಿತು ನಾನು ಸಾಕ್ಷಿ ಅಧಿನಿಯಮದ ಅಡಿಯಲ್ಲಿ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿಪಿ.26 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಐ ಪಿ, ವಕೀಲರಿಂದಃ

ನಾನು ಯಾವ ಮೊಬೈಲ್ ದಿಂದ ಪೊಟೋ ತೆಗೆದಿರುತ್ತೇನೆಂದು ನಿಪಿ.26 ರಲ್ಲಿ ಹೇಳಿಲ್ಲ. ನಿಪಿ.4, 5, 7, 9, 11, ಹಾಗೂ 25 ರಲ್ಲಿ ದಿನಾಂಕ ಹಾಗೂ ಸಮಯ ಇಲ್ಲ ಅಂದರೆ ಸರಿ. ಬರವಣಿಗೆಗೆ ಮೂಲಕ ನಮ್ಮ ಇನ್ಸಪೆಕ್ಟರವರು ಪೊಟೋ ತೆಗೆಯಲು ಹೇಳಿಲ್ಲ. ಮೊಬೈಲದಿಂದ ಯಾವ ಕಂಪ್ಯೂಟರಿಗೆ ಡೌನಲೋಡ್ ಮಾಡಿರುತ್ತೇವೆ ಎಂದು ಹೇಳಿಲ್ಲ. ಪ್ರಿಂಟರ ಯಾವುದು ಅಂತಾ ಹೇಳಿಲ್ಲ. ಯಾವ ಕಂಪ್ಯೂಟರದಿಂದ ಅಪಲೋಡ ಮಾಡಿ ಸಿ ಡಿ ತಯಾರಿಸಿದ್ದೇವೆ ಎಂದು ಹೇಳಿಲ್ಲ. ಪೋನ್ ದಲ್ಲಿರುವ ಸಿಮ್ ಕಾರ್ಡ ಬಗ್ಗೆ ಹೇಳಿಲ್ಲ. ಪ್ರಿಂಟ್ ನಾನೇ ಹಾಕಿರುತ್ತೇನೆ. ಪ್ರಿಂಟ್ ನ್ನು ಯಾವ ಕಂಪ್ಯೂಟರದಿಂದ ಹಾಕಿರುತ್ತೇನೆ ಎಂದು ನಮೂದು ಇಲ್ಲ. ಪೋಲಿಸ ಠಾಣೆಯಲ್ಲಿ ಪೊಟೋ ಪ್ರಿಂಟ್ ಹಾಕಲು ಯಾವುದೇ ಪರಿಕರ ಇಲ್ಲ ಅಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಅಂಕಿ - ಸಂಖ್ಯೆಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ